# ರಜತಪ್ರಭೆಯಲ್ಲಿ ಶರತ್



ಕನ್ನಡ ಚಿತ್ರರಂಗದ ಪ್ರತಿಭಾವಂತ ಕಲಾವಿದರಲ್ಲೊಬ್ಬರಾದ ಶರತ್ ಲೋಹಿತಾಶ್ವ ಅವರಿಗೀಗ ವೃತ್ತಿಜೀವನದಲ್ಲಿ ಬೆಳ್ಳಿಹಬ್ಬದ ಸಂಭ್ರಮ. 1995ರಲ್ಲಿ 'ಹುಲಿಯಾ' ಚಿತ್ರದ ಮೂಲಕ ಚಿತ್ರರಂಗಕ್ಕೆ ಬಂದ ಅವರು, ಈವರೆಗೆ 150ಕ್ಕೂ ಹೆಚ್ಚು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದಾರೆ. ಆದರೆ, ನಟನಾಗಿ ಗುರ್ತಿಸಿಕೊಳ್ಳುವುದು ಶರತ್ ಪಾಲಿಗೆ ಸುಲಭವೇನೂ ಆಗಿರಲಿಲ್ಲ. ಮೊದಲ 15 ವರ್ಷಗಳಲ್ಲಿ ಅವರು ನಟಿಸಿದ್ದು 12 ಚಿತ್ರಗಳಲ್ಲಿ ಮಾತ್ರ ಎನ್ನುವುದು ಅವರು ಸಾಗಿಬಂದ ಹಾದಿಯನ್ನು ಸೂಚಿಸುವಂತಿದೆ.

ಅಗ್ನಿ ಶ್ರೀಧರ್ ಕಥೆಯನ್ನು ಆಧರಿಸಿ, ಕೆ.ಎಂ. ಚೈತನ್ಯ ನಿರ್ದೇಶಿಸಿದ 'ಆ ದಿನಗಳು' ಶರತ್ ಲೋಹಿತಾಶ್ವ ಅವರ ಪ್ರತಿಭೆಯನ್ನು ದೊಡ್ಡಮಟ್ಟದಲ್ಲಿ ಅನಾವರಣಗೊಳಿಸಿದ ಚಿತ್ರ. ಆದರೆ ಈ ಸಿನಿಮಾದ ನಂತರವೂ ಅವರಿಗೆ ಹೆಚ್ಚಿನ ಅವಕಾಶಗಳೇನೂ ಹುಡುಕಿಕೊಂಡು ಬರಲಿಲ್ಲ. ಅವಕಾಶಗಳ ಹೆಚ್ಚಳಕ್ಕಾಗಿ ಅವರು 'ಸಾರಥಿ' ಚಿತ್ರದವರೆಗೆ ಕಾಯಬೇಕಾಯಿತು. 'ಒಬ್ಬ ನಟ ಎಷ್ಟೇ ಒಳ್ಳೆಯ ಪಾತ್ರಗಳಲ್ಲಿ ಅಭಿನಯಿಸಿದರೂ, ಸಿನಿಮಾಗಳು ಗೆಲ್ಲದೆಹೋದರೆ ಅವಕಾಶಗಳು ಹುಡುಕಿಕೊಂಡು ಬರುವುದಿಲ್ಲ' ಎನ್ನುವ ಅನುಭವ ಶರತ್ ಅವರದು.

ತಮಗೆ ದೊರೆಯಬೇಕಾದಷ್ಟು ಅವಕಾಶ ದೊರೆಯಲಿಲ್ಲ ಎನ್ನುವ ಬಗ್ಗೆ ಶರತ್ ಲೋಹಿತಾಶ್ವ ಅವರಿಗೆ ವಿಷಾದವಿಲ್ಲ. ಅವರು ಯಾರನ್ನೂ ದೂಷಿಸಲೂ ಬಯಸುವುದಿಲ್ಲ. 'ಚಿತ್ರರಂಗ ನನಗೆ ಎಲ್ಲವನ್ನೂ ಕೊಟ್ಟಿದೆ' ಎನ್ನುವ ತೃಪ್ತಿ ಅವರದು. ಆಶಿಶ್ ವಿದ್ಯಾರ್ಥಿ ಅವರಿಗೆ ಡಬ್ಬಿಂಗ್ ಮಾಡಲು ನಿರ್ಮಾಪಕರು ಕರೆದಾಗ, ಆ ಸಂದರ್ಭವನ್ನು ತಪ್ಪಿಸಿಕೊಳ್ಳಲು ಶರತ್ ಪ್ರಯತ್ನಿಸಿದ್ದಿದೆ. 'ನಾನು ಡಬ್ಬಿಂಗ್ ಕಲಾವಿದನಲ್ಲ' ಎಂದು ಹೇಳುವುದಲ್ಲದೆ, 'ನಾನು ಕೂಡ ಚೆನ್ನಾಗಿ ನಟಿಸಬಲ್ಲೆ' ಎಂದು ನಿರ್ಮಾಪಕ–ನಿರ್ದೇಶಕರಿಗೆ ಮನವರಿಕೆ ಮಾಡಿಕೊಡಲೂ ಪ್ರಯತ್ನಿಸಿದ್ದಾರೆ. 'ಆಶಿಷ್ ವಿದ್ಯಾರ್ಥಿ ಅವರ ಸಹಾಯಕರಿಗೆ ಕೊಡುವಷ್ಟು ಸಂಭಾವನೆ ಡಬ್ಬಿಂಗ್ ಮಾಡಲು ನನಗೆ ಕೊಡಿ' ಎಂದು ಕೇಳುವ ಮೂಲಕ ತಮ್ಮ ಅಸಮಾಧಾನ ತೋಡಿಕೊಂಡಿರುವುದೂ ಇದೆ. ಆದರೆ, 'ಸಾರಥಿ' ಸಿನಿಮಾ ಗೆದ್ದದ್ದೇ ತಡ – ಶರತ್ ಲೋಹಿತಾಶ್ವ ಅವರ ವೃತ್ತಿಜೀವನದ ದಿಕ್ಕೂ ಬದಲಾಗಿದೆ. ಈಗ ತಮಿಳಿನಲ್ಲೂ ಅವಕಾಶಗಳಿವೆ.

'ನೀವು ವಜ್ರಮುನಿ ಅವರ ಸ್ಥಾನವನ್ನು ತುಂಬಿದ್ದೀರಿ' ಎಂದು ಜನಸಾಮಾನ್ಯರ ಮೆಚ್ಚುಗೆ ಶರತ್ ಲೋಹಿತಾಶ್ವ ಅವರಿಗೆ ಖುಷಿಕೊಟ್ಟಿದೆ.

'ಕಲಾವಿದರಿಗೆ ಆಯ್ಕೆಗಳಿಲ್ಲ. ನಿರ್ದೇಶಕರ ಅಪೇಕ್ಷೆಯಂತೆ ನಾವು ನಟಿಸಬೇಕಾಗುತ್ತದೆ' ಎನ್ನುವ ಅವರ ಮಾತು, ಕನ್ನಡ ಸಿನಿಮಾಗಳಲ್ಲಿ ಸಶಕ್ತ ಪಾತ್ರಗಳು ಯಾಕೆ ರೂಪುಗೊಳ್ಳುತ್ತಿಲ್ಲ ಎನ್ನುವುದನ್ನು ಸೂಚಿಸುವಂತಿದೆ. 'ಬಾಲಕೃಷ್ಣ ಅವರಂಥ ಕಲಾವಿದರ ಮಾತು ಹಾಗೂ ನೋಟದಲ್ಲಿ ಮಚ್ಚಿನ ಹರಿತ ಇರುತ್ತಿತ್ತು. ಈಗ ಆ ಪರಿಣಾಮವನ್ನು ನಿಜವಾದ ಮಚ್ಚು–ಲಾಂಗುಗಳ ಮೂಲಕ ತರಬೇಕಾಗಿದೆ. ಹಿಂದೆ ಯಾವುದು ಅಸಹಜ ಎನ್ನಿಸುತ್ತಿತ್ತೋ ಈಗದು ಸಹಜ ಎನ್ನುವಂತಾಗಿದೆ. ಎಲ್ಲವನ್ನೂ ಕಾರಿಕೊಳ್ಳುವ, ಎಲ್ಲವೂ 'ಲೌಡ್' ಆಗಿರುವ ಸಂದರ್ಭ ಇಂದಿನದು' ಎಂದು ಶರತ್ ಹೇಳುತ್ತಾರೆ.

ಬದಲಾದ ಸಂದರ್ಭದ ಜೊತೆಗೆ ಈ ತಲೆಮಾರಿನ ನಟರಲ್ಲಿ 'ಸಿದ್ಧತೆ ಕಡಿಮೆ' ಎನ್ನುವುದನ್ನೂ ಶರತ್ ಒತ್ತಿಹೇಳುತ್ತಾರೆ. 'ಶಾಸ್ತ್ರೀಯ ಕಲಿಕೆ ಹಾಗೂ ಶಿಸ್ತು ಈಗ ಕಡಿಮೆಯಾಗಿದೆ. ಇಂಥ ಶಿಸ್ತು–ಕಲಿಕೆ ಇರುವ ಕಾರಣದಿಂದಲೇ ರವಿಶಂಕರ್ ಹೆಚ್ಚು ಸಾಧನೆ ಮಾಡುವುದು ಸಾಧ್ಯವಾಗಿದೆ' ಎನ್ನುವುದು ಅವರ ಅನಿಸಿಕೆ.

ಪ್ರಮುಖ ಕಾರಣವನ್ನಾಗಿ ಹಿರಿಯ ಕಲಾವಿದರೊಬ್ಬರು ಗುರ್ತಿಸುತ್ತಾರೆ. ಅವರು ಹೇಳುವ ಪ್ರಕಾರ – 'ಉಳಿವಿಗಾಗಿ ನಾಯಕ ಹೆಚ್ಚು ಹೆಚ್ಚು ಜಾಗರೂಕನಾದಂತೆಲ್ಲ ತನ್ನ ಬಳಗವನ್ನೂ ಬದಲಿಸಿಕೊಳ್ಳತೊಡಗುತ್ತಾನೆ. ಆಗ ಪರಭಾಷೆಯ ನಿರ್ದೇಶಕನನ್ನು ಕರೆತರಲಾಗುತ್ತದೆ. ಆ ನಿರ್ದೇಶಕನ ಜೊತೆಗೆ ಅಲ್ಲಿನ ನಟರೂ ತಂತ್ರಜ್ಞರೂ ಇಲ್ಲಿಗೆ ಬರುತ್ತಾರೆ. ಒಬ್ಬರನ್ನು ನೋಡಿ ಮತ್ತೊಬ್ಬರು ಹೀಗೆ ಬೇರೆಯವರನ್ನು ಕರೆತರುವ ಸ್ಪರ್ಧೆಗಿಳಿಯುತ್ತಾರೆ'. ನಮ್ಮ ಸೂಪರ್‌ಸ್ಟಾರ್‌ಗಳ ಇತ್ತೀಚಿನ ಸಿನಿಮಾಗಳನ್ನು ಗಮನಿಸಿನೋಡಿದರೆ ಈ ಸತ್ಯ ಹೆಚ್ಚು ಸ್ಪಷ್ಟವಾಗುತ್ತದೆ.

ಕನ್ನಡದ ಕಲಾವಿದರ ಪಟ್ಟಿಯನ್ನೊಮ್ಮೆ ನೆನಪಿಸಿಕೊಳ್ಳಿ: ಅವಿನಾಶ್, ಶರತ್ ಲೋಹಿತಾಶ್ವ, ಶೋಭರಾಜ್, ಆದಿ ಲೋಕೇಶ್, ಭಜರಂಗಿ ಲೋಕಿ, ನೀನಾಸಂ ಅಶ್ವತ್ಥ್ – ಇವರುಗಳೆಲ್ಲ ಯಾರಿಗೆ ತಾನೆ ಕಡಿಮೆ.

## ನಮ್ಮವರ ಜೈತ್ರಯಾತ್ರೆ

ಪರಭಾಷಾ ನಟರು ನಮ್ಮಲ್ಲಿ ಅವಕಾಶ ಪಡೆಯುವುದನ್ನು ಆಕ್ಷೇಪಿಸುವ ಸಂದರ್ಭದಲ್ಲೇ ನಮ್ಮ ಕಲಾವಿದರು ಬೇರೆ ಭಾಷೆಯ ಸಿನಿಮಾಗಳಲ್ಲಿ ಹೆಚ್ಚು ನಟಿಸುತ್ತಿರುವುದನ್ನು ಮರೆಯಬಾರದು. ಒಂದು ಕಾಲದಲ್ಲಿ, ದೇವರಾಜ್ ಅವರು ತೆಲುಗು ಚಿತ್ರರಂಗದಲ್ಲಿ ಅತ್ಯಂತ ಬೇಡಿಕೆಯ ಖಳನಟರಾಗಿದ್ದರು. ಚರಣ್‌ರಾಜ್ ಕೂಡ ತೆಲುಗು ಚಿತ್ರರಂಗದಲ್ಲಿ ಬೇಡಿಕೆ ಹೊಂದಿದ್ದರು. ನಂತರ ಆ ಜಾಗವನ್ನು ಪ್ರಕಾಶ್ ರೈ ತುಂಬಿದರು. ವಿಶೇಷವಾಗಿ ತಮಿಳಿನಲ್ಲಿ ಪ್ರಕಾಶ್ ರಾಜ್ ಹೆಸರಿನಲ್ಲಿ ಹೆಚ್ಚು ಜನಪ್ರಿಯರಾದ ಕನ್ನಡದ ರೈ, ನಂತರದ ದಿನಗಳಲ್ಲಿ ದಕ್ಷಿಣ ಭಾರತದ ಜನಪ್ರಿಯ ನಟರಲ್ಲೊಬ್ಬರಾಗಿ ರೂಪುಗೊಂಡರು. ಈಗಂತೂ ಪ್ರಕಾಶ್ ರೈ ನಟನೆ ಮಾತ್ರವಲ್ಲದೆ ನಿರ್ದೇಶಕರಾಗಿ, ನಿರ್ಮಾಪಕರಾಗಿ ತಮ್ಮನ್ನು ದಕ್ಷಿಣದ ಭಾಷೆಗಳಲ್ಲಿ ಪ್ರಯೋಗಕ್ಕೆ ಒಡ್ಡಿಕೊಳ್ಳುತ್ತಿದ್ದಾರೆ.

ಸುದೀಪ್ ಅವರಂತೂ ಕನ್ನಡದಾಚೆಗೆ ಹೆಚ್ಚು ಗುರ್ತಿಸಿಕೊಂಡಿರುವುದೇ ನೇತ್ಯಾತ್ಮಕ ಪಾತ್ರಗಳಲ್ಲಿ. ರಾಜಮೌಳಿ ನಿರ್ದೇಶನದ 'ಈಗ' ಚಿತ್ರದ ಋಣಾತ್ಮಕ ಪಾತ್ರ ಅವರಿಗೆ ಅಪಾರ ಜನಪ್ರಿಯತೆ ತಂದುಕೊಟ್ಟಿತು. ಇವರುಗಳ ಜೊತೆಗೆ ಕಿಶೋರ್, ಶರತ್ ಲೋಹಿತಾಶ್ವ ಅವರಿಗೆ ಕೂಡ ತಮಿಳಿನಲ್ಲಿ ಸಾಕಷ್ಟು ಬೇಡಿಕೆಯಿದೆ. ಹೀಗೆ ಕನ್ನಡದ ನಟರು ತಮಿಳಿನಲ್ಲಿ ಹೆಚ್ಚು ಅವಕಾಶ ಪಡೆಯುವುದನ್ನು ಹೇಗೆ ವಿಶ್ಲೇಷಿಸುವುದು?

ಪ್ರತಿಭಾವಂತರಿಗೆ ಭಾಷೆಯ ಚೌಕಟ್ಟಿಲ್ಲ ಎನ್ನುವುದು ಕಲಾವಿದರ ಪಾಲಿಗೆ ಹೆಚ್ಚು ಸತ್ಯವಾದುದು. ದೇವರಾಜ್, ಪ್ರಕಾಶ್ ರೈ, ಕಿಶೋರ್, ಶರತ್ ಲೋಹಿತಾಶ್ವ – ಇವರೆಲ್ಲ ತಮ್ಮ ಪ್ರತಿಭೆಯ ಮೂಲಕವೇ ಕನ್ನಡದಾಚೆಗೂ ಅವಕಾಶಗಳನ್ನು ಪಡೆದಿದ್ದಾರೆಯೇ ಹೊರತು, ಅಡ್ಡದಾರಿಗಳ ಮೂಲಕವಲ್ಲ. ಇದೇರೀತಿ ತೆಲುಗಿನಿಂದ ಕನ್ನಡಕ್ಕೆ ಬಂದು ತಾರಾವರ್ಚಸ್ಸು ಪಡೆದಿರುವ ರವಿಶಂಕರ್ ಅವರನ್ನು ಗುರ್ತಿಸಬೇಕಿದೆ.

ತಮಿಳಿನಲ್ಲಿ ಕಿಶೋರ್ ಅವರಿಗೆ ಹೆಚ್ಚು ಅವಕಾಶಗಳು ದೊರೆಯಲು ಮತ್ತೊಂದು ಕಾರಣ ಹೊಸಬರ ಬಗ್ಗೆ ಅವರಿಗಿರುವ ಕಾಳಜಿ. ಪ್ರಯೋಗಶೀಲ ಸಿನಿಮಾಗಳ ಬಗ್ಗೆ ಅಪಾರ ಉತ್ಸಾಹ ಹೊಂದಿರುವ ಕಿಶೋರ್, ಅಂಥ ಪ್ರಯತ್ನಗಳಲ್ಲಿ ತೊಡಗಿರುವ ತಂಡದೊಂದಿಗೆ ತಮ್ಮನ್ನು ಗುರ್ತಿಸಿಕೊಳ್ಳಲು ಹಂಬಲಿಸುವ ವಿಶಿಷ್ಟ ನಟ. 'ಕಬಾಲಿ' ಚಿತ್ರ ದೊಡ್ಡ ಹೆಸರು ತಂದುಕೊಟ್ಟ ನಂತರವೂ ಅವರಿಗೆ



ಖಳಪಾತ್ರಗಳಿಂದ ನಾಯಕ ಪಾತ್ರಗಳವರೆಗೆ.. ದೇವರಾಜ್